ರಾಜ್ಯದ ಅಭಿವೃದ್ಧಿಗಾಗಿ ಅರಣ್ಯ ಪ್ರದೇಶದ ಹಸ್ತಾಂತರ

1739 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಬಾರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಮುಖ ನೀರಾವರಿ ಯೋಜನೆಗಳು ಸೇರಿದಂತೆ ರಾಜ್ಯದ ಅಭಿವೃದ್ಧಿಗೆ ಅವಶ್ಯಕವಾಗಿ ಬೇಕಾಗಿರುವ ಅರಣ್ಯ ಪ್ರದೇಶವನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವಂತೆ ಕೇಂದ್ರ ಸರ್ಕಾರಕ್ಕೆ ಏನಾದರೂ ಶಿಫಾರಸ್ಸು ಪತ್ರವೇನಾದರೂ ಕಳುಹಿಸಿದೆಯೇ?

ಆ) ಹಾಗಿದ್ದಲ್ಲಿ ಆ ಅರಣ್ಯ ಪ್ರದೇಶಗಳಾವುವು ಹಾಗೂ ಈ ಬಗ್ಗೆ ಸಮಗ್ರವಾದ ಯೋಜನೆಗಳನ್ನು ಏನಾದರೂ ರೂಪಿಸಿದೆಯೇ? ರೂಪಿಸಿದ್ದಲ್ಲಿ ಪೂರ್ಣ ವಿವರ ನೀಡುವುದು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ನೀರಾವರಿ ಇಲಾಖೆಯ ಪ್ರಸ್ತಾವನೆಯನ್ವಯ ವಿವಿಧ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರಣ್ಯ ಪ್ರದೇಶವನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಲು ಶಿಫಾರಸ್ಸು ಪತ್ರ ರಾಜ್ಯ ಅರಣ್ಯ ಇಲಾಖೆಯಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಆ) ರಾಜ್ಯದ ನೀರಾವರಿ ಯೋಜನೆಗಳ ಅರಣ್ಯ ಪ್ರದೇಶದ ವಿವರಗಳು ಈ ಕೆಳಕಂಡಂತಿವೆ:

			(ಹೆಕ್ಟೇರ್‌ಗಳಲ್ಲಿ)
1.	ಹೊಂದಿರಾಯನಹಳ್ಳ ನೀರಾವರಿ ಯೋಜನೆ	-	16.07
2.	ತುಂಗಾ ಮೇಲ್ದಂಡೆ ಯೋಜನೆ	-	450.00
3.	ವರಾಹಿ	-	275.00
4.	ಉಡುತೊರೆಹಳ್ಳ	-	183.60

ಸಮಗ್ರ ಯೋಜನೆ ತಯಾರಿಸುವ ವಿಷಯವು ರಾಜ್ಯ ಅರಣ್ಯ ಇಲಾಖೆಗೆ ಸಂಬಂಧಿಸಿದೆ.

ಲೋಕಾಯುಕ್ತ ಧಾಳಿಯಿಂದ ವಶಪಡಿಸಿಕೊಂಡಿರುವ ಸಾಮಾಗ್ರಿಗಳ ವಿವರ

1741 - ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) ಶ್ರೀ ಎನ್. ಯೋಗೇಶ್ ಭಟ್, (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕಾಯುಕ್ತವು ಕಳೆದ 3 ವರ್ಷಗಳಲ್ಲಿ ಎಷ್ಟು ಮಂದಿ ಅಧಿಕಾರಿ : ನೌಕರರ ಮೇಲೆ ದಾಳಿ ನಡೆಸಿದೆ. (ವರ್ಷಾವಾರು : ಜಿಲ್ಲಾವರು ವಿವರ ನೀಡುವುದು).

ಆ) ಈ ದಾಳಿಯಿಂದ ದೊರೆತ ನಗದು, ಬ್ಯಾಂಕ್ ಡಿಪಾಸಿಟ್ಸ್, ಆಭರಣಗಳ ಮೊತ್ತವೆಷ್ಟು?

ಇ) ತಪ್ಪಿಸ್ಥರೆಂದು ಸ್ಥಿರವಾದ ಮೇಲೆ ಕ್ರಿಮಿನಲ್ ಕೇಸ್ ಹಾಕಿದವರ ಸಂಖ್ಯೆ ಎಷ್ಟು?

ಈ) ಲೋಕಾಯುಕ್ತ ಕಾಯ್ದೆಯನ್ನು ಇನ್ನೂ ಬಿಗಿಗೊಳಿಸಲು ಸರ್ಕಾರ ಬಯಸಿದೆಯೇ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಒಟ್ಟು 3 ವರ್ಷಗಳಲ್ಲಿ, 62 ದಾಳಿ ಪ್ರಕರಣಗಳನ್ನು ನೊಂದಾಯಿಸಲಾಗಿದೆ. ಇವುಗಳ ವರ್ಷವಾರು ವಿವರ ಮತ್ತು ಜಿಲ್ಲಾವಾರು ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಜಿಲ್ಲೆಗಳು	1994	1995	1996	1997
1	2	3	4	5
1. ಬೆಂಗಳೂರು ನಗರ	12	4	3	-
2. ಬೆಂಗಳೂರು ಗ್ರಾಮಾಂತರ	-	1	-	-
3. ಮೈಸೂರು	2	3	1	1
4. ಮಡಿಕೇರಿ	1	1	-	-
5. ಹಾಸನ	1	-	-	-
6. ಶಿವಮೊಗ್ಗ	2	-	-	-
7. ಬಳ್ಳಾರಿ	1	1	2	-
8. ಮಂಗಳೂರು	1	-	-	-
9. ತುಮಕೂರು	2	3	1	-
10. ಬೆಳಗಾವಿ	2	-	3	-
11. ಗುಲ್ಬರ್ಗಾ	2	1	1	-
12. ರಾಯಚೂರು	1	-	2	1
13. ಧಾರವಾಡ	-	1	2	-
14. ಚಿಕ್ಕಮಗಳೂರು	-	-	1	-
15. ಕಾರವಾರ	-	-	-	1
16. ಚಿತ್ರದುರ್ಗಾ	-	-	1	-
17. ಬೀದರ್	-			
18. ಮಂಡ್ಯ	- -			
19. ಕೋಲಾರ	ಈ ಜಿಲ್ಲೆಗಳಲ್ಲಿ ದಾಳಿ ಪ್ರಕರಣ ಇರುವುದಿಲ್ಲ.			
20. ಬಿಜಾಪುರ	- -			
ಒಟ್ಟು	**27**	**15**	**17**	**3**

ಆ)

	ವರ್ಷ	ನಗದು ರೂ.	ಬ್ಯಾಂಕ್ ಠೇವಣಿ ರೂ.	ಆಭರಣಗಳ ಮೊತ್ತ ರೂ.
1.	1994	9,86,999	70,04,136	32,21,137
2.	1995	9,67,311	16,50,445	26,83,281
3.	1996	11,78,419	90,43,855	1,37,43,935
4.	1997	72,488	5,55,000	1,68,993
		32,05,217	**1,82,53,436**	**1,98,17,346**

ಇ. ಒಟ್ಟು 62 ದಾಳಿ ಪ್ರಕರಣಗಳನ್ನು ನೊಂದಾಯಿಸಿದ್ದು, ಇವುಗಳ ಪೈಕಿ :

1. 7 ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಅಭಿಯೋಜಿಸಲಾಗಿದೆ 3 ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಬೇಕಾಗಿದೆ.
2. 43 ಪ್ರಕರಣಗಳಲ್ಲಿ ತನಿಖೆ ನಡೆಯುತ್ತಿದೆ.
3. 9 ಪ್ರಕರಣಗಳಲ್ಲಿ ಸಾಬೀತಾಗಿಲ್ಲದ ಪ್ರಯುಕ್ತ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿ ಸಲ್ಲಿಸಲಾಗಿದೆ.

ಈ. - ಇಲ್ಲ -

ಅರ್ಕಾಕ್ ಶಾಪ್‌ಗಳನ್ನು ಹರಾಜು ಮೂಲಕ ನಡೆಸುವುದು

1743 - Shri A. Rukmaya Poojari (Vitla) : Will the Chief Minister be pleased to state?

1. *Whether auctions will be conducted for arrack shops during the year 1997-98?*
2. *What are the reasons for not taking any decision by Government so far during this year. What is the stand of the Government in this regard?*

Sri. J.H. Patel (Chief Minister.) :

1. Government vide Order No. FD 18 FDC 97 dated 30.6.97 have accorded permission to dispose of the lease of right of retail vend of liquor for a period of 3 months from 1.8.97 to 31.10.97 for the year 1997-98. The policy